ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು

E-mail:Commissioner.pue@gmail.com. * Ph. No.23361857, 23361858* Fax-2336185

ಸಂಖ್ಯೆ:ಪಿಯುಇ/ಸಿಬ್ಬಂದಿ/ಸಿಆರ್-11/ಎನ್‌ಓಸಿ/2018-19 ದಿನಾಂಕ:16-10-2018

**ಜ್ಞಾಪನ**

ವಿಷಯ:- ಕೇಂದ್ರ/ರಾಜ್ಯ ಸರ್ಕಾರ, ವಿಶ್ವವಿದ್ಯಾಲಯ ಹಾಗೂ ಇತರೆ ಹುದ್ದೆಗಳಿಗೆ ಮತ್ತು ಕೆ.ಸೆಟ್ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ:-ಜಿಲ್ಲಾ ಉಪನಿರ್ದೇಶಕರು, ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರು ಹಾಗೂ ಸಿಬ್ಬಂದಿ ವರ್ಗದವರ ಪತ್ರಗಳು.

-*-

ಪದವಿ ಪೂರ್ವ ಶಿಕ್ಷಣ ಇಲಾಖೆಯ ಸರ್ಕಾರಿ ಪದವಿ ಪೂರ್ವ ಕಾಲೇಜು ಉಪನಿರ್ದೇಶಕರುಗಳ ಕಛೇರಿ ಹಾಗೂ ನಿರ್ದೇಶಕರ ಕಛೇರಿಯಲ್ಲಿ ಸೇವೆ ಸಲ್ಲಿಸುತ್ತಿರುವ ಬೋಧಕ ಸಿಬ್ಬಂದಿಯವರು ರಾಜ್ಯ ಸರ್ಕಾರದ ಇಲಾಖೆಗಳಲ್ಲಿ ಖಾಲಿಯಿರುವ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅನುಮತಿ ಕೋರಿ ಪ್ರಾಂಶುಪಾಲರು ಹಾಗೂ ಉಪನಿರ್ದೇಶಕರ ಮುಖೇನ ಮನವಿ ಪತ್ರಗಳನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಗಳನ್ನು ಪರಿಶೀಲಿಸಿ, ಈ ಕೆಳಕಂಡ ಬೋಧಕ ಸಿಬ್ಬಂದಿ ವರ್ಗದವರ ಹೆಸರಿನ ಮುಂದೆ ತೋರಿಸಿರುವ ಹುದ್ದೆಗೆ ಅರ್ಜಿ ಸಲ್ಲಿಸಲು ಷರತ್ತಿಗೊಳಪಟ್ಟು ಅನುಮತಿ ನೀಡಿದೆ:

| ಕ್ರಸ | ಹೆಸರು ಮತ್ತು ಕಾಲೇಜು ವಿಳಾಸ ಶ್ರೀಮತಿ/ಶ್ರೀ | ಅನುಮತಿ ಕೋರಲಾದ ಹುದ್ದೆ |
|---|---|---|
| 1 | ಶ್ರೀ ಶ್ರೀಮಂತರಾವ ಆರ್,<br>ಇಂಗ್ಲೀಷ ಉಪನ್ಯಾಸಕರು,<br>ಬಾಲಕರ ಸರ್ಕಾರಿ ಪ ಪೂ ಕಾಲೇಜು, ಚಿಟಗುಪ್ಪ,<br>ಹುಮನಾಬಾದ ತಾ॥, ಬೀದರ ಜಿಲ್ಲೆ. | ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು. |

ಷರತ್ತುಗಳು:

1. ಸದರಿ ಸಿಬ್ಬಂದಿಗಳು, ಪರೀಕ್ಷೆಗೆ ಸಂಬಂಧಿಸಿದಂತೆ ಅಧ್ಯಯನವನ್ನು ತಮ್ಮ ಸ್ವಂತ ಖರ್ಚಿನಲ್ಲಿ ಕೈಗೊಳ್ಳತಕ್ಕದ್ದು. ಸಿಬ್ಬಂದಿಗಳು, ಸದರಿ ಪರೀಕ್ಷೆಯ ಅಧ್ಯಯನದ ನಿಮಿತ್ತ ಸರ್ಕಾರ/ಇಲಾಖೆಗೆ ಯಾವುದೇ ಆರ್ಥಿಕ ಹೊರೆ ಉಂಟಾಗತಕ್ಕದ್ದಲ್ಲ.
2. ಸದರಿ ಸಿಬ್ಬಂದಿಗಳು/ಉಪನ್ಯಾಸಕರುಗಳು, ವಿದ್ಯಾರ್ಥಿಗಳ ಪಾಠ-ಪ್ರವಚನಗಳಿಗೆ ತೊಂದರೆ ಉಂಟಾಗದಂತೆ ಬಿಡುವಿನ ವೇಳೆಯಲ್ಲಿ, ಪರೀಕ್ಷೆಯ ಅಧ್ಯಯನಕ್ಕೆ ಬೇಕಾದ ಸಿದ್ಧತೆ ಮಾಡಿಕೊಳ್ಳತಕ್ಕದ್ದು.
3. ಸದರಿ ಸಿಬ್ಬಂದಿಗಳು ಸದರಿ ಪರೀಕ್ಷೆಯ ಅಧ್ಯಯನದ ನಿಮಿತ್ತ ವರ್ಗಾವಣೆ ಕೋರುವಂತಿಲ್ಲ ಅಥವಾ ಅವರ ಪರೀಕ್ಷೆಯ ಅಧ್ಯಯನ ಸರ್ಕಾರದ/ಇಲಾಖೆಯ ವರ್ಗಾವಣೆಗೆ ಅಡ್ಡಿ ಬರುವಂತಿಲ್ಲ.
4. ಸದರಿ ಸಿಬ್ಬಂದಿಗಳು /ಉಪನ್ಯಾಸಕರುಗಳು ಬೇರೆ ಯಾವುದೇ ಇಲಾಖೆಯ ಹುದ್ದೆಗೆ ಆಯ್ಕೆಯಾದಲ್ಲಿ, ಈಗ ಕಾರ್ಯ ನಿರ್ವಹಿಸುತ್ತಿರುವ ಉಪನ್ಯಾಸಕರ ಹುದ್ದೆಯಿಂದ ಬಿಡುಗಡೆ ಹೊಂದುವ ಮೊದಲು ಇಲಾಖೆಯ ಅನುಮತಿ ಪಡೆಯತಕ್ಕದ್ದು.

ಜಂಟಿ ನಿರ್ದೇಶಕರು(ಆಡಳಿತ)
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು:

1.ಸಂಬಂಧಪಟ್ಟ ಜಿಲ್ಲಾ ಉಪ ನಿರ್ದೇಶಕರಿಗೆ.

2.ಸಹಾಯಕ ನಿರ್ದೇಶಕರು, ಇ-ಆಡಳಿತ, ಪಪೂಶಿಇ, ಬೆಂಗಳೂರು.

3.ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರಿಗೆ ಹಾಗೂ ಕಛೇರಿ ಪ್ರತಿ.